**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 839/2020**

ಪಿರ್ಯಾದುದಾರರು ಃ ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು ಃ ಸಚೀನ್ ಮತ್ತು ಇತರರು**

**ಚಾಸಾ ಃ- 01 / ಪ್ರಾಸಾ ಃ- 01**

**ದಿನಾಂಕಃ 29-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ– ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ–**

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1,3 ರಿಂದ 5ನೇ ಆರೋಪಿತರನ್ನು ನೋಡಿ ಗುರುತಿಸಿರುತಾತರೆ . 2ನೇ ಆರೋಪಿ ನ್ಯಾಯಾಲಯದ ಮುಂದೆ ಇಂದು ಗೈರು ಹಾಜರಿದ್ದು ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು ಃ– ಶ್ರೀ. ಎಂ.ಎನ್** ವಕೀಲರಿಂದ **ಆರೋಪಿಗಳ** ಪರವಾಗಿ ಃ–

2. ನಿಮ್ಮ ಮಾವನ ಮನೆಯ ಹತ್ತಿರ ಗಾಡಿ ನಿಲ್ಲಿಸಿರುತ್ತೇನೆ ಎಂದು ನೀವು ಹೇಳಿದ್ದು ನಿಮ್ಮ ಮಾವನ ಮನೆ ನಂಬರ್ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಯ ಚಕ್ಕುಬಂದಿ ಹೇಳಲು ಆಗುತ್ತದೆಯ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ದೂರಿನಲ್ಲಿ ಯಾವ ಬೈಕ್ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ದೂರನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ದಿಃ 06.03.2017 ರಂದು ದೂರು ನೀಡಿರುತ್ತೀರಿ ಅಲ್ಲಿಯವರೆಗೂ ಏನು ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಾನು

ಬೆಳಗ್ಗೆ 10.30ರ ವರೆಗೂ ಯಾರಾದರೂ ಉತ್ಸವ ಇದಿದ್ದರಿಂದ ಎತ್ತುಕೊಂಡು ಹೋಗಿರುತ್ತಾರ ಎಂದು ವಿಚಾರಿಸಿರುತ್ತೇನೆ ಆ ನಂತರ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಯಾರುಯಾರನ್ನು ವಿಚಾರಣೆ ಮಾಡಿರುತ್ತೀರಿ ಎಂದರೆ ಊರಿನಲ್ಲಿ ಸಿಕ್ಕವರನ್ನು ವಿಚಾರಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆದರೆ ಯಾರು ಯಾರು ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ವಾಹನಕ್ಕೆ ಲಾಕ್ ಮಾಡಿರುತ್ತೀರ ಎಂದರೆ ಸಾಕ್ಷಿಯು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

04.ದೂರು ಕೊಟ್ಟಿದ ದಿನ ಪೋಲಿಸರು ಮನೆಯ ಬಳಿ ಬಂದಿರುತ್ತಾರ ಎಂದರೆ ಸಾಕ್ಷಿಯು ಹೌದು ನಾನು ದೂರನ್ನು 10.30ಕ್ಕೆ ನೀಡಿರುತ್ತೇನೆ ಪೋಲಿಸರು ಮಧ್ಯಾಹ್ನ 1.30 ರಿಂದ 2.30ರ ಸಮಯದಲ್ಲಿ ಬಂದು ಮಹಜರ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಗೆ ಪೋಲಿಸರು ಯಾರುಯಾರು ಬಂದಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ನಿಮ್ಮ ಮಾವ ಆ ಮನೆಯಲ್ಲಿ ವಾಸವಿದ್ದರ ಎಂದರೆ  ಸಾಕ್ಷಿಯು ಹೌದು ಎಂದು  ನುಡಿಯುತ್ತಾರೆ. ನಿಮ್ಮ ಮಾವನ ಮನೆಯಲ್ಲಿ ಎಷ್ಟು ಜನ ಇದ್ದಾರೆ ಎಂದರೆ ಸಾಕ್ಷಿಯು ಕುಟುಂಬ ಸಮೇತ ಅಲ್ಲಿಯೇ ಇದ್ದಾರೆ ಎಂದು ನುಡಿಯುತ್ತಾರೆ. ಸುಮಾರು ಎಷ್ಟು ಜನ ಮಹಜರ್ ಗೆ ಸೇರಿರುತ್ತಾರೆ ಎಂದರೆ ಸಾಸಾಕ್ಷಿಯು 4-5 ಜನ ಇದ್ದೇವು ಎಂದು ನುಡಿಯುತ್ತಾರೆ . ಆ 5 ಜನ ಯಾರು ಯಾರು ಎಂದರೆ ಸಾಕ್ಷಿಯು ನಾನು, ಇನ್ನಿಬ್ಬರು ಇದ್ದರು ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಠಾಣೆಗೆ ಹೋದಾಗ ಎಷ್ಟು ಕಡೆ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಠಾಣೆಯಲ್ಲಿ ದೂರಿಗೆ ಮಾತ್ರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಊರಿನ ಮಧ್ಯೆ ಮನೆ ಎಂದು  ಹೇಳಿದ್ದು ಅಲ್ಲಿ ಅಕ್ಕಪಕ್ಕದಲ್ಲಿ ಸುಮಾರು ಮನೆಗಳು ಇವೆ ಎಂದರೆ ಸರಿ.  ನೀವು ಹಾಗೂ ಆರೋಪಿಗಳು ಬೆಂಗಳೂರಿನಲ್ಲಿ ಒಟ್ಟಿಗೆ ಇರುತ್ತೀರಿ ಎಂದರೆ ಸಾಕ್ಷಿಯು ಯಾವಾಗಲೂ ಒಂದು ಬಾರಿ ಹೋಗಿ ಬಂದಿರಬಹುದು ಅಲ್ಲಿಯೇ ಇಲ್ಲ ಎಂದು ನುಡಿಯುತ್ತಾರೆ. ನಿಮಗೂ ಹಾಗೂ ಆರೋಪಿತರಿಗೆ ಹಣಕಾಸಿನ ವಿಚಾರದಲ್ಲಿ ವೈಮನಸ್ಸು ಇತ್ತು ಎಂದರೆ ಸರಿಯಲ್ಲ.

05.ನೀವು ಮತ್ತು ಆರೋಪಿತರು ಸ್ನೇಹಿತರು ಎಂದರೆ ಸಾಕ್ಷಿಯು ನಮ್ಮ ಊರಿನವರು, ಕಳ್ಳತನ ಆಗುವವರೆಗೂ ಸ್ನೇಹಿತರು ಆ ನಂತರ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಉದ್ಯೇಗ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿ. ನಿಮ್ಮ ಬೈಕ್ ಸಹ ಕಳ್ಳತನ ಆಗಿಲ್ಲ ನಿಮಗೂ ಹಾಗೂ ಆರೋಪಿತರಿಗೂ ಹಣ ಕಾಸಿನ ವಿಚಾರದಲ್ಲಿ ಆಗದೆ ಇರುವುದರಿಂದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲಿಸರು ಸ್ಥಳಕೂ ಬಂದಿಲ್ಲ ಮಹಜರ್ ಕ್ರಮ ಸಹ ಅನುಸರಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**